ಮಾನದಂಡಗಳು:–

ನಿವೇಶನ ಹಂಚಿಕೆ ಮಾಡಲು ಕೋರಿ ಅರ್ಜಿದಾರರು ಭರ್ತಿ ಮಾಡಿದ ಮಂಡಳಿಯ ನಿಗಧಿತ ಅರ್ಜಿಯೊಂದಿಗೆ ಉದ್ದೇಶಿತ ಯೋಜನಾ ವರದಿ, ಮಾಲೀಕತ್ವ/ಪಾಲುದಾರಿಕೆ/ಪ್ರೈ.ಲಿಮಿಟೆಡ್/ಪಬ್ಲಿಕ್ ಲಿಮಿಟೆಡ್ ಬಗ್ಗೆ ವಿವರವಾದ ಮಾಹಿತಿ, ಸಣ್ಣ ಕೈಗಾರಿಕಾ ನೋಂದಣಿ ಪ್ರಮಾಣ ಪತ್ರ, ಭೂ ಉಪಯೋಗ ನಕ್ಷೆ, ಇ.ಎಂ.ಡಿ ರೂ.500–00/– ಪ್ರತಿ ಎಕರೆಗೆ ಮತ್ತು ಆಯಾ ಕೈಗಾರಿಕಾ ಪ್ರದೇಶದಲ್ಲಿ ನಿಗಧಿಪಡಿಸಿರುವ ಪ್ರಸಕ್ತ ಬೆಲೆಯಲ್ಲಿ ಶೇ.20% ರಷ್ಟು ಮುಂಗಡ ಹಣವನ್ನು ಡಿ.ಡಿ ಮೂಲಕ ಮಂಡಳಿಯ ಹೆಸರಿಗೆ ಸಲ್ಲಿಸಬೇಕಾಗಿರುತ್ತದೆ.

ತಾಂತ್ರಿಕ ಪದವೀಧರರು, ರಫ್ತು ಯೋಜನೆಗಳು, ಸ್ಥಳೀಯ ಮಹಿಳಾ ಉದ್ಯಮಿಗಳು ವಿಸ್ತರಣೆ ಹಾಗೂ ಸ್ಥಳಾಂತರಕ್ಕಾಗಿ ಹಂಚಿಕೆ ಕೋರಿರುವ ಅರ್ಜಿದಾರರು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅರ್ಜಿದಾರರಿಗೆ ಆದ್ಯತೆಯ ಮೇರೆಗೆ ದಿನಾಂಕ:06–12–2005ರ ಮಂಡಳಿಯ 270ನೇ ಸಭೆಯಲ್ಲಿ ನೀಡಿರುವ ನಿರ್ದೇಶನದಂತೆ ಜಮೀನು ಹಂಚಿಕೆಯನ್ನು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

(ಇ) ಅರ್ಜಿ ಶುಲ್ಕ ರೂ.250.00ಗಳಾಗಿದ್ದು ಅರ್ಜಿಯನ್ನು ಸಲ್ಲಿಸುವಾಗ ಬೆಂಗಳೂರು ನಗರ ಮತ್ತು ಗ್ರಾಮಾಂತರದ ಆಯಾ ಕೈಗಾರಿಕಾ ಪ್ರದೇಶಗಳ ಪ್ರಸಕ್ತ ದರಗಳ ಶೇ.20% ಮುಂಗಡ ಹಣ ಹಾಗೂ ಪ್ರತಿ ಎಕರೆಗೆ ಆರಂಭಿಕ ಠೇವಣಿ ರೂ.500.00 ಗಳನ್ನು ಪಾವತಿಸಬೇಕಾಗಿರುತ್ತದೆ.

(ಈ) ಈ ಕುರಿತು ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ.

(ಉ) ರಾಜಾಜಿನಗರ 6ನೇ ಬ್ಲಾಕಿನಲ್ಲಿರುವ ಇಂಡಸ್ಟ್ರಿಯಲ್ ಎಸ್ಟೇಟ್‌ನಲ್ಲಿ ಬಫರ್ ಜೋನ್ ಇರುವುದಿಲ್ಲ. ಅಂತೆಯೇ ಜಾಗಗಳ ಹಂಚಿಕೆ ಪ್ರಶ್ನೆ ಉದ್ಭವಿಸುವುದಿಲ್ಲ.

ಖಾಸಗಿ, ಸರ್ಕಾರದ ಬೃಹತ್ ಕೈಗಾರಿಕೆಗಳು

257 : (555)

ಶ್ರೀ ಬಂಡೆಪ್ಪ ಕಾಶೆಂಪೂರ (ಬೀದರ್ ದಕ್ಷಿಣ)

ಪ್ರಶ್ನೆ

ಅ) ರಾಜ್ಯದಲ್ಲಿರುವ ಖಾಸಗಿ ಮತ್ತು ಸರ್ಕಾರದ ಬೃಹತ್ ಕೈಗಾರಿಕೆಗಳ ಸಂಖ್ಯೆ ಎಷ್ಟು ಮತ್ತು ಅವುಗಳು ಉತ್ಪಾದಿಸುವ ಉತ್ಪನ್ನಗಳು ಯಾವುವು;